# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 488 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ |
| ಉತ್ತರಿಸುವ ದಿನಾಂಕ | : | 16.09.2022 |
| ಉತ್ತರಿಸುವ ಸಚಿವರು | : | ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಿಂದ ಸುಮಾರು 50 ಕಿ.ಮೀ ದೂರದಲ್ಲಿರುವ ಮಾಗಡಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕನಿಷ್ಠ ನಾಗರೀಕ ಸೌಲಭ್ಯಗಳಿಲ್ಲದೇ ಬದುಕುತ್ತಿರುವ ಇರುಳಿಗರ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಮಾಗಡಿ ತಾಲ್ಲೂಕಿನ ಯಾವ ಯಾವ ಭಾಗಗಳಲ್ಲಿ ಇರುಳಿಗರು ವಾಸಿಸುತ್ತಿದ್ದಾರೆ; ಇವರುಗಳ ಸಂಖ್ಯೆ ಎಷ್ಟು; ಇವರುಗಳಿಗೆ ವಸತಿ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರದಿಂದ ಕಲ್ಪಿಸಲಾಗಿದೆಯೇ; ಇವರಿಗೆ ಸಕಾರದಿಂದ ಸವಲತ್ತುಗಳನ್ನು ಒದಗಿಸಲು ಸರ್ಕಾರ ಯಾವುದಾದರು ಯೋಜನೆಯನ್ನು ರೂಪಿಸುವುದೇ; (ಮಾಹಿತಿ ನೀಡುವುದು) | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ 7 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 11 ಇರುಳಿಗರ ಕಾಲೋನಿಗಳಲ್ಲಿ ಒಟ್ಟು 204 ಕುಟುಂಬಗಳಿದ್ದು, ಒಟ್ಟಾರೆ 853 ಜನಸಂಖ್ಯೆ ಇರುತ್ತದೆ. (ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ)<br><br>**<u>ವಸತಿ ಯೋಜನೆ</u>**<br>• ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ 2021-22ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಇರುಳಿಗರ ಕಾಲೋನಿಗಳಲ್ಲಿ 27 ಫಲಾನುಭವಿಗಳಿಗೆ ವಸತಿ ಅಭಿವೃದ್ಧಿ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.<br>• 2021-22ನೇ ಸಾಲಿನಲ್ಲಿ ಜೇನುಕಲ್ಲುಪಾಳ್ಯದ 16 ಇರುಳಿಗ ಕುಟುಂಬಗಳಿಗೆ ನಿವೇಶನ ಪತ್ರಗಳನ್ನು ನೀಡಲಾಗಿದೆ.<br>• ಮಾಗಡಿ ತಾಲ್ಲೂಕಿನ ಹೂಜ್‌ಗಲ್ ಗ್ರಾಮದ ಸರ್ವೆ ನಂ.82ರಲ್ಲಿ 0.13 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.<br>• ಮಾಗಡಿ ತಾಲ್ಲೂಕಿನ ಮಾಡಬಾಳ್ ಗ್ರಾಮ ಪಂಚಾಯತಿ, ಮಾಡಬಾಳ್ ಹೋಬಳಿ, ಜೇನುಕಲ್ಲುಪಾಳ್ಯದ ಇರುಳಿಗ ಸಮುದಾಯದ 4 ಫಲಾನುಭವಿಗಳಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಪತ್ರ ನೀಡಲಾಗಿದೆ.<br><br>**<u>ಇತರೆ ಸವಲತ್ತುಗಳು/ ಮೂಲಭೂತ ಸೌಕರ್ಯಗಳು.</u>**<br>• ಮಾಗಡಿ ತಾಲ್ಲೂಕಿನ ಜೋಡಿಘಟ್ಟ ಇರುಳಿಗರ ಕಾಲೋನಿಯಲ್ಲಿ ಇಲಾಖಾವತಿಯಿಂದ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಯಲ್ಲಿ 18 ಬಾಲಕ ಹಾಗೂ 7 ಬಾಲಕಿಯರು ಸೇರಿ |

| | | |
|---|---|---|
| | | ಒಟ್ಟು 25 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.<br>• ಸದರಿ ವಿದ್ಯಾರ್ಥಿಗಳಿಗೆ ಉಚಿತ ಆಹಾರ, ಸಮವಸ್ತ್ರ, ಶುಚಿ ಸಂಭ್ರಮ ಕಿಟ್, ನೋಟ್‌ಬುಕ್, ಹಾಸಿಗೆ-ಹೊದಿಕೆ, ವೈಧ್ಯಕೀಯ ತಪಾಷಣೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.<br>• ಮಾಗಡಿ ತಾಲ್ಲೂಕಿನ ಜೇನುಕಲ್ ಪಾಳ್ಯ, ಜೋಡಿಘಟ್ಟ ಇರುಳಿಗರ ಹಟ್ಟಿ, ರಾಮಕಲ್ ಪಾಳ್ಯ ಮತ್ತು ತಾವರೆಕೆರೆ ಇರುಳಿಗರ ಕಾಲೋನಿಗಳಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.<br>1. ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ.<br>2. ಅಂಗನವಾಡಿ ಹಾಗೂ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ.<br>3. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ.<br>4. ತಡೆಗೋಡೆ ನಿರ್ಮಾಣ.<br>5. ವಾಲ್ಮೀಕಿ ಭವನ ನಿರ್ಮಾಣ.<br>ಇನ್ನುಳಿದಂತೆ ಇರುಳಿಗರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುದಾನದ ಲಭ್ಯತೆಗನುಗುಣವಾಗಿ ಹಂತ-ಹಂತವಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಇ) | ಕಳೆದ 3 ವರ್ಷಗಳಲ್ಲಿ ಇವರ ಅಭಿವೃದ್ಧಿಗಾಗಿ ಸರ್ಕಾರವು ವೆಚ್ಚ ಮಾಡಿರುವ ಅನುದಾನ ಎಷ್ಟು; ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | 2017-18 ನೇ ಸಾಲಿನಲ್ಲಿ ರೂ.305.00 ಲಕ್ಷಗಳು ಮತ್ತು 2018-19ನೇ ಸಾಲಿನಲ್ಲಿ ರೂ.25.00 ಲಕ್ಷಗಳು ಸೇರಿ ಒಟ್ಟು ರೂ.330.00 ಲಕ್ಷಗಳಲ್ಲಿ ಮಾಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಇರುಳಿಗರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ) |

ಸಕಇ 424 ಎಸ್‌ಟಿಪಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ-65 (488)ಕ್ಕೆ ಉತ್ತರ**

| ಕ್ರ.ಸಂ | ಪಂಚಾಯ್ತಿ ಹೆಸರು | ಇರುಳಿಗರ ಕಾಲೋನಿ ಹೆಸರು | ಒಟ್ಟು ಕುಟುಂಬಗಳ ಸಂಖ್ಯೆ | ಒಟ್ಟು ಜನಸಂಖ್ಯೆ |
|---|---|---|---|---|
| 1 | ಅದರಂಗಿ | ಚಿಕ್ಕ ಅದರಂಗಿ | 5 | 30 |
| 2 | ಅಜ್ಜನಹಳ್ಳಿ | ಕುರಿಲಿಂಗಯ್ಯನದೊಡ್ಡಿ | 7 | 29 |
| 3 | | ಸಿದ್ದೇಶ್ವರ ಕಾಲೋನಿ | 24 | 80 |
| 4 | ಬಾಚೇನಹಟ್ಟಿ | ಗೊಲ್ಲರಪಾಳ್ಯ ಇರುಳಿಗರ ಕಾಲೋನಿ | 24 | 96 |
| 5 | ಮಾಡಬಾಳ್ | ಜೇನುಕಲ್ಲುಪಾಳ್ಯ | 27 | 112 |
| 6 | | ಸೊಣ್ಣೇನಹಳ್ಳಿ | 15 | 60 |
| 7 | ಹಂಚಿಕುಪ್ಪೆ | ಜೋಡಿಘಟ್ಟ | 52 | 245 |
| 8 | | ರಾಮ್‌ಕಲ್ಲುಪಾಳ್ಯ | 10 | 52 |
| 9 | | ಕಾಳಯ್ಯನಪಾಳ್ಯ | 9 | 48 |
| 10 | ಅಗಲಕೋಟೆ | ಹೇಳಿಗೆಹಳ್ಳಿ ಕಾಲೋನಿ | 23 | 71 |
| 11 | ಕಲ್ಯಾ | ಹೂಜ್‌ಗಲ್ಲು | 8 | 30 |
| ಒಟ್ಟು | | | 204 | 853 |

ಅನುಬಂಧ-2

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಪ್ರಶ್ನೆ ಸಂಖ್ಯೆ-65 (488)ಕ್ಕೆ ಉತ್ತರ**

| ಕ್ರ.ಸಂ. | ತಾಲ್ಲೂಕು | ಇರುಳಿಗರ ಕಾಲೋನಿ ಹೆಸರು ಮತ್ತು ಕಾಮಗಾರಿಯ ವಿವರ | ಅಂದಾಜು ಮೊತ್ತ | ಖರ್ಚಾಗಿರುವ ಮೊತ್ತ |
|---|---|---|---|---|
| | | 2017-18 | | |
| 1 | ಮಾಗಡಿ | ಜೇನುಕಲ್ ಪಾಳ್ಯದಲ್ಲಿ ತಡೆಗೋಡೆ ನಿರ್ಮಾಣ | 107.00 | 80.25 |
| 2 | | ಜೇನುಕಲ್ ಪಾಳ್ಯದಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ | 145.50 | 109.12 |
| 3 | | ಜೇನುಕಲ್ ಪಾಳ್ಯದಲ್ಲಿ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ | 15.00 | 15.00 |
| 4 | | ಜೇನುಕಲ್ ಪಾಳ್ಯದಲ್ಲಿ ಶುದ್ಧ ಕುಡಿಯುವ ನೀರಿನ ಯೋಜನೆ | 7.50 | 7.50 |
| 5 | | ಜೋಡಿಗಟ್ಟೆ ಇರುಳಿಗರ ಹಟ್ಟಿ ಎಸ್.ಟಿ. ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ | 10.00 | 10.00 |
| 6 | | ಮಾಡಬಾಳ್ ಹೋಬಳಿ. ಜೇನುಕಲ್‌ಪಾಳ್ಯದಲ್ಲಿ ವಾಲ್ಮಿಕಿ ಭವನ ನಿರ್ಮಾಣ | 20.00 | 20.00 |
| | | ಒಟ್ಟು ಮೊತ್ತ | **305.00** | **241.87** |
| | | 2018-19 | | |
| 1 | ಮಾಗಡಿ | ಮಾಡಬಾಳ್ ಹೋಬಳಿ. ಕಂಚಿಕುಪ್ಪೆ ಪರಿಶಿಷ್ಟ ಗ್ರಾಮ ಪಂಚಾಯಿತಿ ರಾಮಕಲ್‌ಪಾಳ್ಯ (ಎಸ್.ಟಿ) ಕಾಲೋನಿ ಪರಿಮಿತಿಯಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ಕಾಮಗಾರಿ | 8.00 | 6.00 |
| 2 | | ತಿಪ್ಪಸಂದ್ರ ಹೋಬಳಿ ಹುಳ್ಳೇನಹಳ್ಳಿ ಗ್ರಾಮ ಪಂಚಾಯಿತಿ ತಾವರೆಕೆರೆ (ಎಸ್.ಟಿ) ಕಾಲೋನಿ ಪರಿಮಿತಿಯಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ಕಾಮಗಾರಿ | 9.00 | 6.75 |
| 3 | | ಮಾಡಬಾಳ್ ಹೋಬಳಿ ಕಂಚಿಕುಪ್ಪೆ ಗ್ರಾಮ ಪಂಚಾಯಿತಿ ಜೋಡಿಗಟ್ಟೆ ಇರುಳಿಗರ (ಎಸ್.ಟಿ) ಕಾಲೋನಿ ಪರಿಮಿತಿಯಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 8.00 | 6.00 |
| | | ಒಟ್ಟು ಮೊತ್ತ | 25.00 | 18.75 |
| | | ಒಟ್ಟು ಮೊತ್ತ (2017-18 ಮತ್ತು 2018-19) | 330.00 | 260.62 |